# ಕರ್ನಾಟಕ ರಾಜ್ಯಪತ್ರ

ಅಧಿಕೃತವಾಗಿ ಪ್ರಕಟಿಸಲಾದುದು

ವಿಶೇಷ ರಾಜ್ಯ ಪತ್ರಿಕೆ

| ಭಾಗ – ೪ಎ<br>Part – IVA | ಬೆಂಗಳೂರು, ಮಂಗಳವಾರ, ೧೦, ಫೆಬ್ರವರಿ, ೨೦೨೬ ( ಮಾಘ , ೨೧, ಶಕವರ್ಷ, ೧೯೪೭)<br>BENGALURU, TUESDAY, 10, FEBRUARY, 2026 ( MAGHA , 21, SHAKAVARSHA, 1947) | ನಂ. ೧೪೬<br>No. 146 |
|---|---|---|

## <u>ಕರ್ನಾಟಕ ಸರ್ಕಾರ</u>

ಸಂಖ್ಯೆ:ನಅಇ 08 ಬೆಂರೂಪ್ರಾ 2026(ಇ)

ಕರ್ನಾಟಕ ಸರ್ಕಾರದ ಸಚಿವಾಲಯ,
ವಿಕಾಸ ಸೌಧ,
ಡಾ. ಬಿ.ಆರ್. ಅಂಬೇಡ್ಕರ್ ವೀಧಿ,
ಬೆಂಗಳೂರು, ದಿನಾಂಕ:09.02.2026

## <u>ಅಧಿಸೂಚನೆ</u>

ಸರ್ಕಾರದ ಅಧಿಸೂಚನೆ ಸಂಖ್ಯೆ: ನಅಇ 261 ಬೆಂರೂಪ್ರಾ 2024, ಬೆಂಗಳೂರು, ದಿನಾಂಕ:27-11-2024 ರಲ್ಲಿ ಚಿಂತಾಮಣಿ ವಿಸ್ತರಿತ ಸ್ಥಳೀಯ ಯೋಜನಾ ಪ್ರದೇಶ ಎಂದು ಘೋಷಿಸಿ ಚಿಂತಾಮಣಿ ಯೋಜನಾ ಪ್ರಾಧಿಕಾರದ ಎಲ್ಲೆಯನ್ನು ಪರಿಷ್ಕರಿಸಿ ಆದೇಶಿಸಲಾಗಿದೆ. ಕರ್ನಾಟಕ ನಗರಾಭಿವೃದ್ಧಿ ಪ್ರಾಧಿಕಾರಗಳ ಕಾಯ್ದೆ, 1987ರ ಕಲಂ 3(1) ರಡಿಯಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ, ಅಧಿಸೂಚನೆ ಸಂಖ್ಯೆ: ನಅಇ 08 ಬೆಂರೂಪ್ರಾ 2026(ಇ), ದಿನಾಂಕ:09.02.2026 ರಲ್ಲಿ ಚಿಂತಾಮಣಿ ನಗರಾಭಿವೃದ್ಧಿ ಪ್ರಾಧಿಕಾರವನ್ನು ಘೋಷಿಸಲಾಗಿದೆ. ಕರ್ನಾಟಕ ನಗರಾಭಿವೃದ್ಧಿ ಪ್ರಾಧಿಕಾರಗಳ ಅಧಿನಿಯಮ 1987 (1987 ರ ಕರ್ನಾಟಕ ಅಧಿನಿಯಮ 34) ರ ಕಲಂ 3(3) ಮತ್ತು (4) ರ ಅನುಸಾರ ಚಿಂತಾಮಣಿ ನಗರಾಭಿವೃದ್ಧಿ ಪ್ರಾಧಿಕಾರವು ಈ ಕೆಳಕಂಡಂತೆ ಅಧ್ಯಕ್ಷರು ಮತ್ತು ಸದಸ್ಯರನ್ನು ಒಳಗೊಂಡಿರುತ್ತದೆ.

| ಕ್ರಮ ಸಂಖ್ಯೆ | ಅಧ್ಯಕ್ಷರು / ಸದಸ್ಯರು | ಷರಾ |
|---|---|---|
| 1. | ಅಧ್ಯಕ್ಷರು<br>ಕಲಂ 3(3) (ಎ) ರನ್ವಯ | ಜಿಲ್ಲಾಧಿಕಾರಿ, ಚಿಕ್ಕಬಳ್ಳಾಪುರ ಜಿಲ್ಲೆ (ಸರ್ಕಾರದಿಂದ ಅಧಿಕಾರೇತರರನ್ನು ನಾಮ ನಿರ್ದೇಶನ ಮಾಡುವವರೆಗೆ). |
| 2. | ನಗರ ಯೋಜಕ ಸದಸ್ಯರು<br>ಕಲಂ 3(3) (ಬಿ) ರನ್ವಯ | ಸದಸ್ಯ ಕಾರ್ಯದರ್ಶಿಗಳು (ಸಹಾಯಕ ನಿರ್ದೇಶಕರು) ಚಿಂತಾಮಣಿ ಯೋಜನಾ ಪ್ರಾಧಿಕಾರ.<br>ಚಿಂತಾಮಣಿ ಯೋಜನಾ ಪ್ರಾಧಿಕಾರದ ಸದರಿ ಸಹಾಯಕ ನಿರ್ದೇಶಕರ ಹುದ್ದೆಯನ್ನು ನಗರಾಭಿವೃದ್ಧಿ ಪ್ರಾಧಿಕಾರದಲ್ಲಿ ಮುಂದುವರೆಸಲಾಗಿದೆ. |
| 3. | ಅಭಿಯಂತರರ ಸದಸ್ಯರು<br>ಕಲಂ 3(3) (ಸಿ) ರನ್ವಯ | ಕಾರ್ಯಪಾಲಕ ಇಂಜಿನಿಯರ್, ಲೋಕೋಪಯೋಗಿ ಇಲಾಖೆ, ಚಿಂತಾಮಣಿ. |

R.N.I. No. KARBIL/2001/47147 POSTAL REGN. No. RNP/KA/BGS/2202/2017-19
Licensed to post without prepayment **WPP No. 297**



| | | |
|---|---|---|
| 4. | ವಿಧಾನ ಸಭಾ ಸದಸ್ಯರು/ ವಿಧಾನ ಪರಿಷತ್ ಸದಸ್ಯರು<br>ಕಲಂ 3(3) (ಡಿ) ರನ್ವಯ | ಪೂರ್ಣ ಅಥವಾ ಭಾಗಶಃ ಪ್ರದೇಶವನ್ನು ಪ್ರತಿನಿಧಿಸುತ್ತಿರುವ ಸದಸ್ಯರು/ ಸ್ಥಳೀಯ ಯೋಜನಾ ಪ್ರದೇಶದ ವ್ಯಾಪ್ತಿಯಲ್ಲಿ ಶಾಶ್ವತವಾಗಿ ವಾಸವಾಗಿರುವ ಸದಸ್ಯರು. |
| 5. | ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿಯ ಪ್ರತಿನಿಧಿ ಕಲಂ 3(3) (ಇ) ರನ್ವಯ | ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ ಚಿಂತಾಮಣಿ ಪ್ರತಿನಿಧಿ. |
| 6. | ವಿದ್ಯುತ್ ಸರಬರಾಜು ಕಂಪನಿಯ ಪ್ರತಿನಿಧಿ<br>ಕಲಂ 3(3) (ಎಫ್) ರನ್ವಯ | ವಿದ್ಯುತ್ ಸರಬರಾಜು ಕಂಪನಿ ಚಿಂತಾಮಣಿ ಪ್ರತಿನಿಧಿ. |
| 7. | ಪೌರಾಯುಕ್ತರು, ನಗರಸಭೆ<br>ಕಲಂ 3(3) (ಜಿ) ರನ್ವಯ | ಪೌರಾಯುಕ್ತರು ನಗರಸಭೆ, ಚಿಂತಾಮಣಿ – ಪದನಿಮಿತ್ತ |
| 8. | ಜಿಲ್ಲಾಧಿಕಾರಿಗಳು<br>ಕಲಂ 3(3) (ಹೆಚ್) ರನ್ವಯ | ಜಿಲ್ಲಾಧಿಕಾರಿ ಚಿಕ್ಕಬಳ್ಳಾಪುರ ಜಿಲ್ಲೆ – ಪದನಿಮಿತ್ತ. |
| 9. | ಸ್ಥಳೀಯ ಸಂಸ್ಥೆಯಾದ ನಗರ ಸಭೆಯ ಚುನಾಯಿತ ಒಬ್ಬ ಪ್ರತಿನಿಧಿ<br>ಕಲಂ 3(3) (ಐ) ರನ್ವಯ | ಚುನಾಯಿತ ಸದಸ್ಯರಲ್ಲಿ ಒಬ್ಬರನ್ನು ಸರ್ಕಾರದಿಂದ ನೇಮಿಸಲಾಗುತ್ತದೆ. |
| 10. | ಆರಕ್ಷಕ ಅಧೀಕ್ಷಕರು,<br>ಕಲಂ 3(3) (ಜೆ) ರನ್ವಯ | ಆರಕ್ಷಕ ಅಧೀಕ್ಷಕರು, ಚಿಕ್ಕಬಳ್ಳಾಪುರ ಜಿಲ್ಲೆ – ಪದನಿಮಿತ್ತ. |
| 11. | ಜಿಲ್ಲಾ ಆರೋಗ್ಯಾಧಿಕಾರಿಗಳು,<br>ಕಲಂ 3(3) (ಕೆ) ರನ್ವಯ | ಜಿಲ್ಲಾ ಆರೋಗ್ಯಾಧಿಕಾರಿ, ಚಿಕ್ಕಬಳ್ಳಾಪುರ ಜಿಲ್ಲೆ – ಪದನಿಮಿತ್ತ |
| 12. | ಆರ್ಕಿಟೆಕ್ಚರ್ ನಲ್ಲಿ ಅನುಭವ ಹೊಂದಿರುವ ವ್ಯಕ್ತಿ<br>ಕಲಂ 3(3) (ಎಲ್) ರನ್ವಯ | ಸರ್ಕಾರದಿಂದ ನೇಮಿಸಲಾಗುವುದು. |
| 13. | ಒಬ್ಬ ಮಹಿಳೆ ಮತ್ತು ಒಬ್ಬ ಪರಿಶಿಷ್ಟ ಜಾತಿ ಅಥವಾ ಪರಿಶಿಷ್ಟ ಪಂಗಡದವರನ್ನು ಒಳಗೊಂಡಂತೆ ನಾಲ್ಕು ಜನ ಸದಸ್ಯರು<br>ಕಲಂ 3(3) (ಎಂ) ರನ್ವಯ | ಸರ್ಕಾರದಿಂದ ನೇಮಿಸಲಾಗುವುದು. |
| 14. | ಆಯುಕ್ತರು,<br>ಕಲಂ 3(3) (ಎನ್) ರನ್ವಯ | ಗ್ರೂಪ್-ಎ ಅಧಿಕಾರಿಯನ್ನು ಸರ್ಕಾರದಿಂದ ನಿಯೋಜಿಸಲಾಗುವುದು |

ಕರ್ನಾಟಕ ರಾಜ್ಯ ಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ

**(ಲತಾ.ಕೆ)**
ಸರ್ಕಾರದ ಅಧೀನ ಕಾರ್ಯದರ್ಶಿ,
(ಅಭಿವೃದ್ಧಿ ಪ್ರಾಧಿಕಾರ ಮತ್ತು ನಯೋಸೇ),
ನಗರಾಭಿವೃದ್ಧಿ ಇಲಾಖೆ.

ಮುದ್ರಕರು ಹಾಗೂ ಪ್ರಕಾಶಕರು:– ಸಂಕಲನಾಧಿಕಾರಿಗಳು, ಕರ್ನಾಟಕ ರಾಜ್ಯಪತ್ರ, ಸರ್ಕಾರಿ ಕೇಂದ್ರ ಮುದ್ರಣಾಲಯ, ಬೆಂಗಳೂರು

THAMMAIAH